ಡ್ಯಾನಿಯೆಲಾ ಟ್ರಾಯ್ಕೋವಿಚ್ ಅವರ
ಎರಡು ಕವಿತೆಗಳು



## ಅಂಜೂರ

ರಾಗ ರತಿಯ ನಂಜೇರಿ ಆಕಾಶ
ಆವರಿಸಿತು ಅಂಜೂರದ ಮರವ
ಜೂನ್ ತಿಂಗಳಲ್ಲಿ


ಅವಳ ಮೈ ತುಂಬ ಸಿಡಿದು
ನೂರಾರು ಪುಟ್ಟ ಅಂಜೂರದ ಕಾಯಿ
ಎದ್ದು ನಿಂತವು ಮೊಲೆ ತೊಟ್ಟುಗಳಂತೆ

ಪ್ರೇಮಿ ಮತ್ತವನ ಪ್ರೇಮದ ಛಾಯೆ

ಎದೆಹಾಲುಣಿಸಿದ ಮೇಲೆ
ಕೊನೆಯ ಹನಿಯೊಂದು ತೊಟ್ಟಿಕ್ಕುತ್ತಲೇ
ಉಳಿದುಬಿಡುವಂತೆ

ನಾನೋ ಅಂಜೂರದ ಮರದಂತೆ
ನಡುಗಿಹೋದೆ
ನನ್ನ ಎಳೆಯ ಪ್ರೇಮಿಯ ರಭಸಕ್ಕೆ
ಕೈ ಕಾಲು ಎಸೆದು
ಅಸ್ತವ್ಯಸ್ತವಾಗಿ

ಏಕೆಂದರೆ
ದೇವರ ಪ್ರಕಾರ
ನಿಷಿದ್ಧ ಕಾಮವದು



ಕಲೆ: ಎಸ್.ಎಸ್. ಕಾಖಂಡಕಿ

## ಮಂದಹಾಸ

ನನ್ನ ಅರಿವು
ಅನುಭವಗಳ ಜೊತೆಗೆ
ನಿರರ್ಥಕವಾಗಿ ಕಾದಾಡುವ
ಹುಂಬ ಪ್ರಿಯತಮ
ನೀನಲ್ಲವೇ ಅಲ್ಲ

ತಲೆಗಿಂತ ವೃಷಣವೇ ದೊಡ್ಡದಿರುವ
ಆ ಕುತಂತ್ರಿ ಅಶ್ಲೀಲ ವ್ಯಕ್ತಿ ನೀನಲ್ಲ

ಅದಕ್ಕೇ ಅವನು
ಮುಖದ ಬದಲು
ಲೈಂಗಿಕ ಅಂಗಗಳ ಫೋಟೋಗಳನ್ನೇ
ನನಗೆ ಕಳಿಸಿದ್ದು

ಹಾಗಂತ
ಮದುವೆಯಾಗುತ್ತೇನೆಂದು ಮಾತು ಕೊಟ್ಟು
ನನ್ನಿಂದ ನಿರಾಕರಿಸಲ್ಪಟ್ಟ
ಆ ಶಾಂತ ಸಭ್ಯ ಮನುಷ್ಯ ಕೂಡ ನೀನಲ್ಲ

ಏಕೆಂದರೆ
ನಾನು ಕಾಯುತ್ತಿರುವೆ
ಕಾಯುತ್ತಲೇ ಇರುವೆ
ಯಾರಿಗೋ ...

ಸದ್ಯಕ್ಕೆ ನೀನು
ನನ್ನೊಳಗಿನ ಕರಾಳ ಕತ್ತಲನ್ನ
ಒದ್ದು ಖೆಡ್ಡಕ್ಕೆ ಕೆಡವುವ
ಮಧುರ ಮಂದಹಾಸ ಅಷ್ಟೆ!